ಶ್ರೀ ಪಿ.ಜಿ.ಆರ್ ಸಿಂಧ್ಯ (ಗೃಹ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಈ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಮನೆಗಳಿಗೆ ವಿದ್ಯುತ್ ಸೌಲಭ್ಯ

650 (880) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97, 97-98, 98-99ನೇ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಸಲುವಾಗಿ ನಿಗಧಿಪಡಿಸಿದಿ ಮೊತ್ತವೆಷ್ಟು? (ವರ್ಷವಾರು ವಿವರನೀಡುವುದು)

ಆ) ಈ ಪೈಕಿ ವೆಚ್ಚ ಮಾಡಿದ ಹಣವೆಷ್ಟು? ಎಷ್ಟು ಗೃಹಗಳಿಗೆ ವಿದ್ಯುತ್‌ಸೌಲಭ್ಯ ಒದಗಿಸಲಾಗಿದೆ? (ವರ್ಷವಾರುವಿವರ ನೀಡುವುದು)

ಇ) ರಾಜ್ಯದಲ್ಲಿ ಇನ್ನೂ ಎಷ್ಟು ಗೃಹಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲು ಬಾಕಿ ಇದೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) 1996-97, 97-98 ಹಾಗೂ 1998-99ನೇ ಸಾಲುಗಳಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಸಲುವಾಗಿ ನಿಗಧಿಪಡಿಸಿದ ವರ್ಷವಾರು ಮೊತ್ತದ ವಿವರ ಕೆಳಕಂಡಂತಿದೆ.

ವರ್ಷ	ನಿಗಧಿಪಡಿಸಿದ ಮೊತ್ತ (ಲಕ್ಷ ರೂ.ಗಳಲ್ಲಿ)
ಪರಿಶಿಷ್ಟ ವರ್ಗ ಪರಿಶಿಷ್ಟ ಜಾತಿ :	
1) 1996-97	410.00
2) 1997-98	155.00
3) 1998-99	302.00
ಪರಿಶಿಷ್ಟ ಪಂಗಡ :	
1) 1996-97	100.00
2) 1997-98	155.00
3) 1998-99	153.00

ಆ) ಈ 1996-97, 1997-98 ಮತ್ತು 1998-99ರ ಸಾಲುಗಳಲ್ಲಿ ಖರ್ಚು ಮಾಡಿದ ವೆಚ್ಚದ ವಿವರಗಳು ಹೀಗಿವೆ.

ವರ್ಷ		ಖರ್ಚು ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ)
ಪರಿಶಿಷ್ಟ ಜಾತಿ :		
1996-97	-	182.58
1997-98	-	190.86
1998-99	-	25.09 (ಫೆಬ್ರವರಿ 99ರ ವರೆಗೆ ತಾತ್ಕಾಲಿಕ)
ಪರಿಶಿಷ್ಟ ಪಂಗಡ :		
1) 1996-97	-	73.61
2) 1997-98	-	94.64
3) 1998-99	-	11.58 (ಫೆಬ್ರವರಿ 99ರವರೆಗೆ ತಾತ್ಕಾಲಿಕ)

1996-97, 1997-98 ಮತ್ತು 1998-99 ಸಾಲುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿರುವ ವಿದ್ಯುತ್ ಸಂಪರ್ಕಗಳ ಸಂಖ್ಯೆಯವರ್ಷವಾರು ವಿವರ ಕೆಳಕಂಡಂತಿದೆ.

ವರ್ಷ		ವಿದ್ಯುತ್ ಸಂಪರ್ಕ ನೀಡಿರುವ ಸಂಖ್ಯೆ
ಪರಿಶಿಷ್ಟ ಜಾತಿ		
1) 1996-97	-	38,765
2) 1997-98	-	37,352
3) 1998-99	-	4,910 (ಫೆಬ್ರವರಿ 99ರ ವರೆಗೆ ತಾತ್ಕಲಿಕ)
ಪರಿಶಿಷ್ಟ ಪಂಗಡ :		
1) 1996-97	-	15,628
2) 1997-98	-	18,521
3) 1998-99	-	2,266 (ಫೆಬ್ರವರಿ 99ರ ವರೆಗೆ ತಾತ್ಕಾಲಿಕ)

ಇ) ಮಂಡಳಿಯು ಸರ್ಕಾರದಿಂದ ಅನುಮೋದಿಸಲ್ಪಡುವ ತನ್ನ ವಾರ್ಷಿಕ ಆಯ-ವ್ಯಯದಲ್ಲಿ ನಿಗದಿಪಡಿಸಲಾದ ಗುರಿಗೆ ಅನುಸಾರವಾಗಿ ಭಾಗ್ಯಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಫಲಾನುಭವಿಗಳ ವಸತಿಗೃಹಗಳ ವಿದ್ಯುದೀಕರಣ ಕಾರ್ಯವನ್ನು ಜಾರಿಗೊಳಿಸುತ್ತದೆ. ಸದರಿ ಯೋಜನೆಯಡಿ ಅರ್ಹ ಫಲಾನುಭವಿಗಳ ವಿವರಗಳನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಯಿಂದಪಡೆದುಕೊಳ್ಳಲಾಗುತ್ತದೆ. ಭಾಗ್ಯಜ್ಯೋತಿ ಸಂಪರ್ಕ ಕಲ್ಪಿಸಲು ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಒಳಪಡುವ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತದೆ. ಫಲಾನುಭವಿಗಳು ಗುರುತಿಸುವಿಕೆಯನ್ನು ತಾಲ್ಲೂಕು ಪಂಚಾಯಿತಿಯು ಕೈಗೊಳ್ಳುವುದರಿಂದ ಬಾಕಿ ಉಳಿದಿರುವ ಫಲಾನುಭವಿಗಳ ಬಗ್ಗೆ ಮಾಹಿತಿಗಳು ಲಭ್ಯವಿರುವುದಿಲ್ಲ.